| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ]  [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ]  [ Total No. of Printed Pages : 24

**ಸಂಕೇತ ಸಂಖ್ಯೆ : 01-K**  **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K**  **Subject : First Language — KANNADA**

ದಿನಾಂಕ : 18. 06. 2013 ]  [ Date : 18. 06. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ]  [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 125 ]  [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ''ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು'' ಈ ವಾಕ್ಯದಲ್ಲಿಯ ಕ್ರಿಯಾರೂಪವು :

(ಎ) ಸಂಭವನಾರ್ಥಕ (ಬಿ) ನಿಷೇಧಾರ್ಥಕ

(ಸಿ) ವಿದ್ಯರ್ಥಕ (ಡಿ) ಆತ್ಮಾರ್ಥಕ

*ಉತ್ತರ :* ____________________

2. ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ :

(ಎ) ಮ್ (ಬಿ) ಒಳ್

(ಸಿ) ಅತ್ತಣಿಂ (ಡಿ) ಇಂದಂ

*ಉತ್ತರ :* ____________________

3. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ :

(ಎ) ಒಂಬತ್ತು (ಬಿ) ಹದಿಮೂರು

(ಸಿ) ಇಪ್ಪತ್ತೈದು (ಡಿ) ನಲ್ವತ್ತೊಂಬತ್ತು

*ಉತ್ತರ :* ______________________________

4. ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ :

(ಎ) ವಿವರಣಾತ್ಮಕ ಚಿಹ್ನೆ (ಬಿ) ಪ್ರಶ್ನಾರ್ಥಕ ಚಿಹ್ನೆ

(ಸಿ) ಉದ್ಧರಣ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

*ಉತ್ತರ :* ______________________________

5. ಜಶ್ತ್ವ ಸಂಧಿಗೆ ಉದಾಹರಣೆಯಿದು :

(ಎ) ಕಂಬನಿ (ಬಿ) ಕೈಯಾಡಿಸು

(ಸಿ) ದೇವಾಲಯ (ಡಿ) ವಾಗ್ದೇವಿ

*ಉತ್ತರ :* ______________________________

6. 'ಹತ್ತೆಂಟು' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಆಗಮ ಸಂಧಿ (ಬಿ) ಆದೇಶ ಸಂಧಿ

(ಸಿ) ಲೋಪ ಸಂಧಿ (ಡಿ) ಗುಣ ಸಂಧಿ

*ಉತ್ತರ :* ______________________________

7. 'ಕುಡಿಹುಬ್ಬು' ಪದವು ಈ ಸಮಾಸಕ್ಕೆ ಉದಾಹರಣೆ :

(ಎ) ದ್ವಿಗು (ಬಿ) ಅಂಶಿ

(ಸಿ) ಕರ್ಮಧಾರಯ (ಡಿ) ತತ್ಪುರುಷ

*ಉತ್ತರ :* ______________________________

8. ''ಬಂಗಾರ ಮೋರೆ ತೊಳೆದೇನ'' ಈ ವಾಕ್ಯದಲ್ಲಿರುವ 'ಮೋರೆ' ಪದದ ಗ್ರಾಂಥಿಕ ರೂಪ :

(ಎ) ಮುಖ (ಬಿ) ಮೊರೆ

(ಸಿ) ಕರ (ಡಿ) ಕರೆ

*ಉತ್ತರ :* ______

9. ''ಮೈಸೂರಿನಲ್ಲಿ ಜಗತ್ಪ್ರಸಿದ್ಧ ಅರಮನೆಯಿದೆ'' ಈ ವಾಕ್ಯವು :

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ವಿಶೇಷ ವಾಕ್ಯ

*ಉತ್ತರ :* ______

10. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ ಇದು :

(ಎ) ಲೆಕ್ಕಿಗ (ಬಿ) ಅಲ್ಲಿಯತನಕ

(ಸಿ) ದೊಡ್ಡತನ (ಡಿ) ಹಣವಂತ

*ಉತ್ತರ :* ______

11. 'ಚದುರರ್' ಈ ಪದದ ಹೊಸಗನ್ನಡ ರೂಪ :

(ಎ) ವೀರರು (ಬಿ) ಸಾಮಾನ್ಯರು

(ಸಿ) ದಡ್ಡರು (ಡಿ) ಜಾಣರು

*ಉತ್ತರ :* ______

12. ''ಅವರ ಜ್ಞಾನಸಂಗ್ರಹ ನಿಜವಾದ ಶಕ್ತಿಯಾಗಿ ಪರಿಣಮಿಸಿದೆ'' ಈ ವಾಕ್ಯದಲ್ಲಿಯ ಸರ್ವನಾಮಪದ :

(ಎ) ಅವರ (ಬಿ) ಶಕ್ತಿ

(ಸಿ) ಜ್ಞಾನ (ಡಿ) ಸಂಗ್ರಹ

*ಉತ್ತರ :* ______

13. ಕಂದಪದ್ಯದಲ್ಲಿರುವ ಮಾತ್ರೆಗಳ ಸಂಖ್ಯೆ

(ಎ) ನೂರಾ ಎರಡು ( 102 ) (ಬಿ) ಅರವತ್ನಾಲ್ಕು ( 64 )

(ಸಿ) ನೂರಾ ನಲ್ವತ್ನಾಲ್ಕು ( 144 ) (ಡಿ) ಹನ್ನೆರಡು ( 12 )

ಉತ್ತರ : ______

14. ''ಪಂಪನು ಕನ್ನಡದ ಆದಿಕವಿಯೆಂಬುದು ನಮಗೆ ಹೆಮ್ಮೆ'' ಈ ವಾಕ್ಯದಲ್ಲಿರುವ ಅಂಕಿತನಾಮ :

(ಎ) ನಮಗೆ (ಬಿ) ಹೆಮ್ಮೆ

(ಸಿ) ಪಂಪ (ಡಿ) ಕನ್ನಡ

ಉತ್ತರ : ______

15. 'ಉಭಯ' ಪದದ ಅರ್ಥ

(ಎ) ಅಭಯ (ಬಿ) ಭಯ

(ಸಿ) ನಾಲ್ಕು (ಡಿ) ಎರಡು

ಉತ್ತರ : ______

16. ಈ ಕೆಳಗಿನ 'ಅ' ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು 'ಬ' ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| ಅ | | ಬ | |
|---|---|---|---|
| i) | ಸಾಮಾನ್ಯ ಅವ್ಯಯ | ಅ) | ಜುಲ್ಮಾನೆ |
| ii) | ನುಡಿಗಟ್ಟು | ಆ) | ಸಂಜ್ಞಾ |
| iii) | ಪರ್ಷಿಯನ್ | ಇ) | ಮಾರಣಹೋಮ |
| iv) | ತತ್ಸಮ ರೂಪ | ಈ) | ಹೊಚ್ಚಹೊಸ |
| v) | ದ್ವಿರುಕ್ತಿ | ಉ) | ಚೆನ್ನಾಗಿ |
| | | ಊ) | ಬಟಾಟೆ |
| | | ಋ) | ನೋವು-ನಲಿವು |
| | | ೠ) | ದಬ ದಬ |

ಉತ್ತರ : i) ______

ii) ______

iii) ______

iv) ______

v) ______

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಇಂಗ್ಲಿಷ್ ಶಬ್ದಗಳು .......................................................... ಉಡುಪನ್ನು ಧರಿಸಿ ಒಳಗೆ ಬಂದುಬಿಟ್ಟಿವೆ.

18. ಗೌರಿ ಹೆಜ್ಜೆ ಹಾಕಿದ ನೆಲದಲ್ಲಿ .......................................................................... ಬೆಳೆಯಿತು.

19. 1956 ರ ಅಕ್ಟೋಬರ್ ತಿಂಗಳ ವಿಜಯದಶಮಿಯ ದಿನ ಸರಳ ಸಮಾರಂಭದಲ್ಲಿ ನಾನು ............................. ದ ಆರಂಭೋತ್ಸವವನ್ನು ಜರುಗಿಸಿದೆ.

20. ಶ್ರೀ ಹೃದಯಶಾರದೆಯ ಭಜಿಸಿ ಪಡೆದವಳ ಕರದ .................................................................. ತೆರೆ.

21. ನಿತ್ಯ ಅನ್ನದಾನವಿರಲು ............................................................................... ಏತಕೆ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ಯಾವ ವಿಚಾರವಾಗಿ ತರಪೇತು ಕೊಡುತ್ತವೆ ?

23. ಬುದ್ಧನು ತಾನು ಯಾವುದರ ಸಾಧಕನೆಂದು ಅಂಗುಲೀಮಾಲನಿಗೆ ತಿಳಿಸಿದನು ?

24. ಗೌರಿ ಸಿದ್ದಪ್ಪನನ್ನು ನಾಗರಹಾವಿನಿಂದ ಹೇಗೆ ರಕ್ಷಿಸಿದಳು ?

25. ಕಡಿದಾಳ್ ಮಂಜಪ್ಪನವರ ವಿದ್ಯಾಭ್ಯಾಸ ಕಾಲದಲ್ಲಿ ವಿದ್ಯಾರ್ಥಿಗಳ ಗುರಿ ಏನಾಗಿದ್ದಿತು ?

26. ಭಾರತೀಯ ರಕ್ಷಣಾಪಡೆಗಳು ಯಾವುದರ ಸಂಕೇತವಾಗಿವೆ ?

27. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು ?

28. ಕನಕದಾಸರ ಪ್ರಕಾರ ಸತ್ಯವಂತರ ಸಂಗವಿರುವವನಿಗೆ ಯಾವುದು ಬೇಡ ?

29. ಯಕ್ಷನ ರೂಪದಲ್ಲಿ ಬಂದವರು ಯಾರು ?

30. ಮಾನವನು ವಂದ್ಯನಾಗುವುದು ಯಾವಾಗ ?

31. ಅಕ್ಕಮಹಾದೇವಿಯವರ ಪ್ರಕಾರ ಪ್ರಕೃತಿಯಲ್ಲಿ ಒಂದೇ ಆಗಿರುವ ಅಂಶಗಳಾವುವು ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ಆಂಗ್ಲಭಾಷೆ ವಿಶ್ವವ್ಯಾಪಿಯಾಗಲು ಕಾರಣಗಳೇನು ?

33. ಮನುಷ್ಯನು ನಕ್ಕಾಗ ಆತನ ಮುಖದಲ್ಲಾಗುವ ಬದಲಾವಣೆಗಳಾವುವು ?

34. ರಾಚಪ್ಪನು ಕೋಪದಲ್ಲಿ ಸಿದ್ದಪ್ಪನಿಗೆ ಏನು ಮಾಡಿದನು ?

35. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

36. ಸ್ವಾಮಿ ಜಗದಾತ್ಮಾನಂದರ ಪ್ರಕಾರ ಮನುಷ್ಯನಲ್ಲಿ ಅಪಾರ ಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣಗಳೇನು ?

37. ಇಂದ್ರಾದಿ ದೇವತೆಗಳಲ್ಲಿ ಪಶುಲೋಮನು ಏನೆಂದು ಬೇಡಿಕೊಂಡನು ?

38. ಚಂದನದಾಸನಿಗೆ ಒದಗಿದ ವಿಪತ್ತು ಯಾವುದು ?

39. ಆಹಾರದ ನಿರೀಕ್ಷೆಯಲ್ಲಿದ್ದ ಸಿಂಹವನ್ನು ಕವಿ ಹೇಗೆ ಬಣ್ಣಿಸಿದ್ದಾನೆ ?

40. ಯಾರು ಯಾರನ್ನು ಭಾರತವೆಂಬ ಬೋಧಿವೃಕ್ಷದ ಕೊಂಬೆಗಳೆಂದು ಕವಿ ವರ್ಣಿಸಿದ್ದಾನೆ ?

41. ಅರವಿಂದ ಮಾಲಗತ್ತಿಯವರ ಪ್ರಕಾರ ರಕ್ತಮೀರಿದ ಸಂಬಂಧದ ಹಿನ್ನೆಲೆ ಯಾವುದು ?

42. ಹಲ್ಲಣ, ಬೆಲ್ಲ, ಹುಟ್ಟು, ಸೊಲ್ಲಿಗೆಗಳ ಪ್ರಾಮುಖ್ಯತೆಯನ್ನು ಗೋಪಾಲದಾಸರು ಹೇಗೆ ವ್ಯಕ್ತಪಡಿಸಿದ್ದಾರೆ ?

43. ಯಕ್ಷನು ಧರ್ಮಜನನ್ನು ಮೆಚ್ಚಿದ ಪ್ರಸಂಗವನ್ನು ಕುರಿತು ಬರೆಯಿರಿ.

44. ದುರ್ಯೋಧನನು ನೀರೊಳಗಿದ್ದೂ ಬೆವರಲು ಕಾರಣಗಳೇನು ?

45. ಭೀಮನು ದುರ್ಯೋಧನನ ಮೇಲೆ ಗದಾಪ್ರಹಾರ ಮಾಡುವಾಗ ಕೊಟ್ಟ ಕಾರಣಗಳನ್ನು ಬರೆಯಿರಿ.

46. ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳು ಯಾವುವು ?

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : 5 × 3 = 15

47. ''ಹಲ್ಲಿಲ್ಲದ ಬಾಯಿ ಇಲಿಯ ಬಿಲದಂತೆ''

48. ''ಜಗತ್ತು ಪೂಜಿಸುವುದು ಶಕ್ತಿಯನ್ನು ; ದುರ್ಬಲತೆಯನ್ನಲ್ಲ''.

49. ''ಗಾವ ಸಿಂಗಮೆಂದುದು ನಿನ್ನಂ''

50. ''ಮಾವು ಬೇವು ಫಲ ಬಲಾಬಲ''

51. ''ಮಱಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು''

ಈ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 3 = 6

52. ಡಾ॥ ಪ್ರಭುಶಂಕರ

53. ಮುಕ್ತಾಯಕ್ಕ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$

''ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ''

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : $1 \times 3 = 3$

''ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ''.

56. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಅರಮನೆಗಿಂತ ನೆರೆಮನೆ ಲೇಸು

— ಅತಿ ಆಸೆ ಗತಿ ಕೆಡಿಸಿತು

— ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ವಿಪಿನಚರ ______________________

______________________

______________________

______________________ಬಲ್ಲರ್.

ಅಥವಾ

ಜನ್ಮಭೂಮಿಯ ______________________

______________________

______________________

______________________ಸಂಬಂಧವೇ ಎಲ್ಲ.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ : $1 \times 4 = 4$

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚನ್ನಸೋಮೇಶ್ವರಾ॥

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ತಿಪ್ಪೇನಹಳ್ಳಿ ಶಾಲೆಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ಕುರಿತು ನಿಮ್ಮ ಮಾತಿನಲ್ಲಿ ವಿವರಿಸಿ.
— ಕ್ಯಾಪ್ಟನ್ ಗುರುಬಚ್ಚನ್ ಸಿಂಗ್‌ನ ಸಾಹಸವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.
— ಸಿಂಹವನ್ನು ಕೊಲ್ಲಲು ಮೊಲವು ಮಾಡಿದ ತಂತ್ರೋಪಾಯಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

60.

61. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಹೆಣ್ಣು ಮಕ್ಕಳಿಗೆ ತವರಿನ ಬಗೆಗಿರುವ ಅಭಿಮಾನವನ್ನು ನಮ್ಮ ಜನಪದರು ಹೇಗೆ ವ್ಯಕ್ತಪಡಿಸಿದ್ದಾರೆ ?

— ಭೀಮ ದುರ್ಯೋಧನರು ಪರಸ್ಪರ ಹೊಡೆದಾಡಿದ ಸನ್ನಿವೇಶವನ್ನು, ಅದರ ಪರಿಣಾಮವನ್ನು ವಿವರಿಸಿ.

62. — ನಿಮ್ಮನ್ನು ಬೆಂಗಳೂರಿನ ನ್ಯಾಷನಲ್ ಪ್ರೌಢಶಾಲೆಯ ‘ಭುವನ’ ಎಂದು ಭಾವಿಸಿಕೊಂಡು ಶಿವಮೊಗ್ಗದ ತೀರ್ಥಹಳ್ಳಿಯಲ್ಲಿ ವಾಸವಾಗಿರುವ ನಿಮ್ಮ ತಾಯಿಯವರಿಗೆ ಅಭ್ಯಾಸ ಹಾಗೂ ಆರೋಗ್ಯದ ಕುರಿತು ಪತ್ರ ಬರೆಯಿರಿ. $1 \times 5 = 5$

ಅಥವಾ

— ನೀವು ಎಸ್.ಎಸ್.ಎಲ್.ಸಿ. ಪಾಸಾಗಿದ್ದೀರೆಂದು ಭಾವಿಸಿ ಮುಂದಿನ ವ್ಯಾಸಂಗಕ್ಕಾಗಿ ನಿಮ್ಮ ಅಂಕಪಟ್ಟಿ ಹಾಗೂ ವರ್ಗಾವಣೆ ಪ್ರಮಾಣಪತ್ರವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ನಾನು ಮೆಚ್ಚಿದ ಪುಸ್ತಕ

— ಜನಸಂಖ್ಯಾಸ್ಫೋಟಕ್ಕೆ ಪರಿಹಾರೋಪಾಯಗಳು

— ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ